ಬೈಟ್ ಇಲ್ಲದೆ ನೀಡಿದರೆ ದೋಷವಿಲ್ಲವೇ?' ಎಂದು ಕುತೂಹಲ ತೋರಿಸಿದರು.

'ಉಂಟೋ ಇಲ್ಲವೋ ಗೊತ್ತಿಲ್ಲ. ಇದು ಲೇಟೆಸ್ಟ್ ವ್ಯಾಕ್ಸಿನೇಶನ್ ಅಂತ ಪ್ರೂವ್ ಆಗಿದೆ. ಈ ಹಿಂದೆ ಆ್ಯಂಟಿ ರ್‍ಯಾಬೀಸ್ ವ್ಯಾಕ್ಸಿನೇಶನನ್ನು ರೋಗಿಯ ಹೊಟ್ಟೆಗೆ ಹೊಕ್ಕುಳಿನ ಸುತ್ತಲು ಕೊಡುವ ಕ್ರಮ ಇತ್ತು. ಅದರಲ್ಲಿ ತೊಂದರೆಗಳು ಕಾಣಿಸಿಕೊಳ್ಳುತ್ತಿದ್ದವು ಮತ್ತು ಅದು ತುಂಬಾ ಪೈನ್‌ಫುಲ್ ಆಗಿತ್ತು. ಇದು ಹಾಗಿಲ್ಲ. ತೋಳಿಗೆ ಚುಚ್ಚುವ ಇಂಜೆಕ್ಷನ್'

'ಹಾಗಾದರೆ ನಾನು ಭಟ್ಟರನ್ನು ರಾಂಪುರಕ್ಕೆ ಕಳುಹಿಸುವುದೋ?'

'ಖಂಡಿತ ಕಳುಹಿಸಿ'

ಮರುದಿನ ದಾಸುಭಟ್ರ ಜೊತೆ ಕುಪ್ಪಣ್ಣಯ್ಯನೂ ರಾಂಪುರದ ಸರಕಾರಿ ಸಾರ್ವಜನಿಕ ಆಸ್ಪತ್ರೆಗೆ ಹೋದರು. ಅಲ್ಲಿನ ವೈದ್ಯಾಧಿಕಾರಿ ಕುಪ್ಪಣ್ಣಯ್ಯ ಮತ್ತು ದಾಸುಭಟ್ರು ಹೇಳುವುದನ್ನೆಲ್ಲ ಕೇಳಿ, 'ನನ್ನ ಅಭಿಪ್ರಾಯವೂ ನಿಮ್ಮ ಡಾ. ರಾಯಪ್ಪನದ್ದೇ. ಆದರೆ ನಿಮಗೆ ಆತಂಕ ಮತ್ತು ಭಯ ಇದೆಯಲ್ಲಾ? ಮೂರು ಇಂಜೆಕ್ಷನ್ ಸಾಕು. ಯಾಕೆಂದರೆ ಅದು ರೇಬಿಸ್ ಇದ್ದ ಬೆಕ್ಕು ಹೌದೂ ಅಲ್ಲವೋ ಗೊತ್ತಿಲ್ಲ. ಒಂದು ಇಂಜೆಕ್ಷನ್ ಈಗ, ಆಮೇಲೆ ಮೂರನೇ ದಿನಕ್ಕೆ ಬನ್ನಿ. ಆಮೇಲೆ ಏಳನೇ ದಿನಕ್ಕೆ' ಎಂದರು.

'ನಮ್ಮ ಆಸ್ಪತ್ರೆಯಲ್ಲಿ ಈ ಇಂಜೆಕ್ಷನ್ ಲಭ್ಯವಿಲ್ಲವೇ ಸರ್?' ಎಂದು ಕುಪ್ಪಣ್ಣಯ್ಯ ವಿನಯದಿಂದ ಪ್ರಶ್ನಿಸಿದರು. 'ಇಲ್ಲ ಆರು ತಿಂಗಳಿಂದ ಯಾವುದೇ ರೇಬೀಸ್ ಕೇಸು ಬಂದಿಲ್ಲ. ಆದ್ದರಿಂದ ನಾವು ಇಂಡೆಂಟ್ ಹಾಕಿಲ್ಲ. ಅದು ಪೂನೆಯ ಸೀರಮ್ ಇನ್‌ಸ್ಟಿಟ್ಯೂಟ್‌ನಿಂದ ಬರಬೇಕು. ಬಂದರೆ ಸಾಕೇ? ಅದನ್ನು 'ಕೋಲ್ಡ್ ಚೈನ್'ನಲ್ಲಿ ಇಡಬೇಕು. ಅದೆಲ್ಲ ಯಾರು ಮಾಡುತ್ತಾರೆ? ನಾನು ರೇಬೀಸ್ ಬೈಟ್ ಕೇಸು ಬಂದಾಗ, ಮೆಡಿಕಲ್ಸ್‌ಗೆ ಚೀಟಿ ಬರೆದು ಕೊಡುತ್ತೇನೆ ರೋಗಿ ತಂದರೆ ನಾವು ಕೊಡುತ್ತೇವೆ' ಎಂದವರೇ 'ಹೆಚ್ಚು ಮಾತನಾಡಲು ಬಿಡುವು ಮತ್ತು ಇಷ್ಟ ಇಲ್ಲ' ಎಂಬಂತೆ ಕ್ಯೂನಲ್ಲಿ ಇದ್ದ ಮತ್ತೊಬ್ಬ ರೋಗಿಯನ್ನು ಕರೆದು 'ನಿನ್ನದೇನಯ್ಯಾ ಸಮಸ್ಯೆ?' ಎಂದು ತಮ್ಮ ಕರ್ತವ್ಯದಲ್ಲಿ ತೊಡಗಿದರು.

ದಾಸಭಟ್ರು ಇನ್ನೂರೈವತ್ತು ರೂಪಾಯಿ ತೆತ್ತು ಸರಕಾರಿ ಸಾರ್ವಜನಿಕ ಆಸ್ಪತ್ರೆಯಲ್ಲಿ ಇಂಜೆಕ್ಷನ್ ತೆಗೆದುಕೊಂಡು ಊರಿಗೆ ಮರಳಲು ಬಸ್ ಹತ್ತಿದರು.

'ಅಲ್ಲ! ಸರಕಾರಿ ಆಸ್ಪತ್ರೆಗಳು ಈ ರೀತಿ ಬಡ ರೋಗಿಗಳನ್ನು ನಿರ್ಲಕ್ಷಿಸಿದರೆ ಗತಿ ಏನು?'ಎಂದು ಅವರು ತನ್ನ ಪಕ್ಕದಲ್ಲಿ ಕುಳಿತ ಕುಪ್ಪಣ್ಣಯ್ಯನವರಲ್ಲಿ ಹೇಳಿದಾಗ, 'ಸುಮ್ಮನೆ ಇಂಜೆಕ್ಷನ್ ತಗೊಳ್ಳಿ, ತಲೆಹರಟೆ ಮಾಡಬೇಡಿ' ಎಂದು ಸ್ವಲ್ಪ ಅಸಹನೆ ಪ್ರದರ್ಶಿಸಿದರು. ದಾಸುಭಟ್ರಿಗೆ ಸಿಟ್ಟು ಬಂತು. 'ಅಲ್ಲಯ್ಯ, ಒಂದು ನಾಯಿ ಕಡಿತಕ್ಕೆ ಒಂದೂವರೆ ಸಾವಿರವನ್ನು ರೋಗಿ ಎಲ್ಲಿಂದ ತರುವುದು ಹೇಳಿ? ಆಮೇಲೆ ಅದು ಎಲ್ಲಾ ಆಸ್ಪತ್ರೆಯಲ್ಲೂ ಸಿಗಬೇಕಾಗಿದ್ದು, ತಾಲೂಕು ಕೇಂದ್ರದಲ್ಲೂ ಅದು ಸಿಗುವುದಿಲ್ಲ ಅಂದರೆ ಇದೆಂಥ ಪ್ರಜಾಪ್ರಭುತ್ವ ದೇಶವಯ್ಯಾ?' ಎಂದು ಕುಂಡೆ ಬಾಯಿ ಹರಿದರು. ಅವರ ನರಸಿಂಹಾವತಾರವನ್ನು ನೋಡಿದ ಕುಪ್ಪಣ್ಣಯ್ಯ ಎರಡು ನಿಮಿಷ ಮಾತನಾಡಲಿಲ್ಲ. ಆಮೇಲೆ, 'ನೀವು ಈಗ ಬೊಬ್ಬೆ ಹೊಡೆಯುವುದರಿಂದ ಏನೂ ಆಗುವುದಿಲ್ಲ ಭಟ್ರೇ. ಕ್ರಿಯಾತ್ಮಕವಾಗಿ ಏನು ಮಾಡಬೇಕೆಂದು ಯೋಚಿಸಿದ್ದೀರಿ?' ಎಂದು ಕೇಳಿದರು. ದಾಸುಭಟ್ರಿಗೆ ಕುಪ್ಪಣ್ಣಯ್ಯ ತನ್ನನ್ನು ಬೆಂಬಲಿಸದೆ ನಿರ್ಲಕ್ಷಿಸುತ್ತಿದ್ದಾರೆ ಅನಿಸಿ ಸಿಟ್ಟು ನೆತ್ತಿಗೇರಿ, 'ನಾನು ನನ್ನ 'ಶಾಟ'ವನ್ನು ಕಿತ್ತುಕೊಳ್ಳಬೇಕು' ಎಂದು 'ತೊಡೆ ಕೆಳಗಿನ ಮಾತು' ಆಡಿದರು. ಕುಪ್ಪಣ್ಣಯ್ಯನವರಿಗೆ ಅಸಹ್ಯವೆನಿಸಿ ಮೌನವಾದರು. ನಾನು ಆಡಿದ್ದು ಜಾಸ್ತಿಯಾಯಿತೋ ಎನ್ನುವಷ್ಟರಲ್ಲಿ ದಾಸುಭಟ್ರು ದುರ್ದಾನ ತೆಗೆದುಕೊಂಡವರಂತೆ ಬಸ್ಸಿನಿಂದ ಇಳಿದು ಹೋಟೇಲಿಗೆ ಬಾರದೆ ನೇರವಾಗಿ ಮನೆಗೆ ಹೋದರು.

ಎರಡು ದಿನದ ಮೇಲೆ ಪಂಚಾಯತಿನಲ್ಲಿ ವಿರೋಧ ಪಕ್ಷದ ನಾಯಕನ ಸ್ಥಾನವನ್ನು ತುಂಬಿದ್ದ ವೀರಪ್ಪಗೌಡರು ಸಂಜೆ ಆರು ಗಂಟೆಯ ಹೊತ್ತಿಗೆ ದುರ್ಗಾಭವನದಲ್ಲಿ ಪ್ರತ್ಯಕ್ಷರಾಗಿ “ನಮಸ್ಕಾರ ಸ್ವಾಮಿ” ಎಂದು ಕುಪ್ಪಣ್ಣಯ್ಯನವರಿಗೆ ಕೈ ಮುಗಿದರು. ಕಳೆದ ಪಂಚಾಯತ್ ಚುನಾವಣೆಯಲ್ಲಿ ಹನ್ನೊಂದಕ್ಕೆ ಹನ್ನೊಂದು ಮಂದಿಯನ್ನು ಚುನಾವಣೆಗೆ ನಿಲ್ಲಿಸಿದ್ದ ಅವರು ಐದು ಸ್ಥಾನಗಳನ್ನು ಗಳಿಸಿದ್ದರು. ಸೋತವರಲ್ಲಿ ದಾಸುಭಟ್ರೂ ಒಬ್ಬರು. ಸೋತದ್ದು ಆರು ಮತಗಳಲ್ಲಿ. ಕುಪ್ಪಣ್ಣಯ್ಯ ದಾಸುಭಟ್ರನ್ನು ಬೆಂಬಲಿಸಿ ಎರಡು ದಿನ ಕ್ಷೇತ್ರದಲ್ಲಿ ಓಡಾಡಿ ಮತ ಯಾಚಿಸಿದ್ದರು. ಆದರೆ ಅವರು ಸೋತ ನೋವು ದಾಸಭಟ್ರಿಗಿಂತ